ದಿನಾಂಕಃ 08-05-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು

**ಪಾಟೀ ಸವಾಲುಃ ಎರಡನೇ ಎದುರುದಾರರ ಪರ ವಕೀಲರಿಂದಃ-**

ದಾಖಲೆಗಳ ಪ್ರಕಾರ ದಿನಾಂಕ 23-05-22 ರಂದು ಅಪಘಾತವು ಆಗಿರುತ್ತದೆ ಎಂದರೆ ಸರಿ. ಈ ಅರ್ಜಿಯನ್ನು ಒಂದು ವರ್ಷದ ನಂತರದಲ್ಲಿ ಹಾಕಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಚಿಕಿತ್ಸೆ ಪಡೆದುಕೊಂಡ ನಂತರದಲ್ಲಿ ಹಾಕಿದ್ದೇನೆ ಎಂದು ಹೇಳುತ್ತಾರೆ. ನಾನು ಚಾಲನೆ ಮಾಡುತ್ತಿದ್ದ ವಾಹನ ನನ್ನ ತಮ್ಮನ ಹೆಸರಿನಲ್ಲಿ ಇತ್ತು. ಅದಕ್ಕೆ ವಿಮೆ ಇತ್ತು ಆದರೆ ಯಾವ ಕಂಪನಿ ಎಂದು ನನಗೆ ಗೊತ್ತಿಲ್ಲ. ನನಗೆ ಚಾಲನಾ ಪ್ರಮಾಣ ಪತ್ರ ಇದೆ ಮತ್ತು ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಈ ಪ್ರಕರಣದಲ್ಲಿ ನಾನು ನನ್ನ ವಾಹನದ ಮಾಲೀಕ ಮತ್ತು ವಿಮೆ ಕಂಪನಿಯನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ. ಅಪಘಾತದ ನಂತರದಲ್ಲಿ ಮೊದಲಿಗೆ ನಾನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ನಂತರದಲ್ಲಿ ಶಿವಮೊಗ್ಗದ ನಿರೋ ಭಾರತ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿಂದ ಮತ್ತೆ ಅಶೋಕ ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ತೀವ್ರ ಸ್ವರೂಪದ ಗಾಯಳಾಗಿದ್ದ ಕಾರಣ ತರೀಕೆರೆ ಆಸ್ಪತ್ರೆಯಲ್ಲಿ ನಾನು ಯಾವುದೇ ಮಾಹಿತಿ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ, ನನ್ನ ಕುಟುಂಬದವರು ಕೊಟ್ಟಿರಬಹುದು. ನಂತರದ ಎರಡೂ ಆಸ್ಪತ್ರೆಗಳಲ್ಲಿ ಅಪಘಾತದಲ್ಲಿ ಗಾಯ ಆದ ಬಗ್ಗೆ ವೈದ್ಯರಿಗೆ ಮಾಹಿತಿ ಕೊಟ್ಟಿದ್ದೇವೆ. ನಾನು ನಿರೋ ಭಾರತ ಆಸ್ಪತ್ರೆಯಲ್ಲಿಯೇ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಆದರೆ ಕಾಲಿನ ಶಸ್ತ್ರ ಚಿಕಿತ್ಸೆಗೆ ಮಾತ್ರ ಎರಡು ದಿನ ಅಶೋಕ ಆಸ್ಪತ್ರೆಗೆ ಹೋಗಿದ್ದೇನೆ. ಸದರಿ ಆಸ್ಪತ್ರೆಯಲ್ಲಿ ನನಗೆ ಯಾವುದೇ ರೀತಿ ಕಾಲಿನ ಆಗಿಲ್ಲ ಎಂದರೆ ಸರಿಯಲ್ಲ. ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ನಾನು ಹೇಳಿದಷ್ಟು ಪ್ರಮಾಣ ಖರ್ಚು ನನ್ನ ಚಿಕಿತ್ಸೆ ಗಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಹೆಚ್ಚಿನ ಪರಿಹಾರ ಪಡೆಯಲು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ವ್ಯವಸಾಯಗಾರ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ, ಆರ್.ಟಿ.ಸಿ.ಗಳು ನನ್ನ ತಂದೆಯ ಹೆಸರಿನಲ್ಲಿವೆ. ನಾನು ವ್ಯಾಪಾರ ಕೂಡಾ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ನನಗೆ ವ್ಯಾಪಾರ ಮತ್ತು ಕೃಷ್ಟಿಯಿಂದ ತಿಂಗಳಿಗೆ ರೂ.25000/- ವರಮಾನ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಯಸ್ಸು 35 ಆಗಿದ್ದರೂ ಕೂಡಾ ಸುಳ್ಳು ವಯಸ್ಸನ್ನು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಜನನದ ದಿನಾಂಕವನ್ನು ತೋರಿಸಲು ದಾಖಲೆ ಕೊಟ್ಟಿದ್ದೇನೆ. ನಾನು ಕೇಳಿದಷ್ಟು ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ವಾಹನದ ಮಾಲೀಕರು ಮತ್ತು ವಿಮಾ ಕಂಪನಿಯನ್ನು ಪಾರ್ಟಿ ಮಾಡದ ಕಾರಣ

ಅರ್ಜಿ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ.25000/- ವರಮಾನ ಇರುವುದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಈ ಪ್ರಕರಣಕ್ಕಾಗಿಯೇ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

Sd/-

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.***